# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 390 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | : | ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 18.02.2022 |

*****

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೇಂದ್ರ ಸರ್ಕಾರದ " ಸಮಗ್ರ ತೋಟಗಾರಿಕೆ ಅಭಿವೃದ್ಧಿ ಅಭಿಯಾನ" (MIDH) ಅಡಿಯಲ್ಲಿ ಮಸಾಲಾ/ಸಾಂಬಾರ ಸಂಬಂಧಿಸಿದ ಬೆಳೆಗಳಿಗೆ ತೋಟಗಾರಿಕೆ ಬೆಳೆಗಾರರಿಗೆ ಸಹಾಯಧನ ನೀಡುತ್ತಿರುವುದು ನಿಜವೇ; ಹಾಗಿದ್ದಲ್ಲಿ ಈ ಅಭಿಯಾನದ ಪೂರ್ಣ ವಿವರ ಮತ್ತು ಕಳೆದ 3 ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಪಡೆದಿರುವ ಸಹಾಯಧನವೆಷ್ಟು; | ರಾಜ್ಯದಲ್ಲಿ ಕೇಂದ್ರ ಸರ್ಕಾರದ " ಸಮಗ್ರ ತೋಟಗಾರಿಕೆ ಅಭಿವೃದ್ಧಿ ಅಭಿಯಾನ"(MIDH) ಅಡಿಯಲ್ಲಿ ಮಸಾಲಾ/ಸಾಂಬಾರ ಸಂಬಂಧಿಸಿದ ಬೆಳೆಗಳಿಗೆ ತೋಟಗಾರಿಕೆ ಬೆಳೆಗಾರರಿಗೆ ಸಹಾಯಧನ ನೀಡಲಾಗುತ್ತಿದೆ.<br><br>ಈ ಯೋಜನೆಯಡಿ ಮಸಾಲಾ/ಸಾಂಬಾರು ಬೆಳೆಗಳಿಗೆ ಸಹಾಯಧನ ನೀಡಲಾಗುತ್ತಿದ್ದು, Seed Spices, ಶುಂಠಿ ಮತ್ತು ಅರಿಶಿಣ ಬೆಳೆಗಳ ಪ್ರದೇಶ ವಿಸ್ತರಣೆಗಾಗಿ ಪ್ರತಿ ಹೆಕ್ಟೇರ್ ಗೆ ರೂ.12,000 ದಂತೆ ಪ್ರತಿ ಫಲಾನುಭವಿಗೆ 4 ಹೆಕ್ಟೇರ್ ವರೆಗೆ ಸಹಾಯಧನವನ್ನು ನೀಡಲಾಗುತ್ತದೆ. ಕಾಳುಮೆಣಸು, ಚಕ್ಕೆ, ಲವಂಗ ಹಾಗೂ ಜಾಯಿಕಾಯಿ ಬೆಳೆಗಳ ಪ್ರದೇಶ ವಿಸ್ತರಣೆಗಾಗಿ ಪ್ರತಿ ಹೆಕ್ಟೇರ್ ಗೆ ರೂ.20,000 ದಂತೆ ಪ್ರತಿ ಫಲಾನುಭವಿಗೆ 4 ಹೆಕ್ಟೇರ್ ವರೆಗೆ ಸಹಾಯಧನವನ್ನು ನೀಡಲಾಗುತ್ತದೆ.<br><br>ಹಳೆಯ ಹಾಗೂ ಅನುತ್ಪಾದಕ ಕಾಳು ಮೆಣಸು ಬೆಳೆಯ ತೋಟವನ್ನು ಪುನ:ಶ್ಚೇತನಗೊಳಿಸುವ ಸಲುವಾಗಿ 2 ಹೆಕ್ಟೇರ್ ವರೆಗೆ ರೂ.40,000 ಸಹಾಯಧನವನ್ನು ನೀಡಲಾಗುತ್ತದೆ.<br><br>ಕಳೆದ ಮೂರು ವರ್ಷಗಳಲ್ಲಿ ಅಂದರೆ 2018-19, 2019-20 ಮತ್ತು 2020-21 ರಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಪಡೆದಿರುವ ಸಹಾಯಧನದ ವಿವರ ಈ ಕೆಳಕಂಡಂತಿರುತ್ತದೆ. (ರೂ.ಕೋಟಿಗಳಲ್ಲಿ) |

**(ರೂ.ಕೋಟಿಗಳಲ್ಲಿ)**

| ಕ್ರ. ಸಂ | ವರ್ಷ | ಆರ್ಥಿಕ |
|---|---|---|
| 1 | 2018-19 | 2.72 |
| 2 | 2019-20 | 2.54 |
| 3 | 2020-21 | 3.54 |
| ಒಟ್ಟು | | **8.80** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಈ ಸಹಾಯ ಧನವನ್ನು ಯಾವ ರೀತಿ ಮತ್ತು ಯಾವ ಆಧಾರದ ಮೇಲೆ ತೋಟಗಾರಿಕೆ ಬೆಳೆಗಾರರಿಗೆ ಹಂಚಲಾಗಿದೆ; (ಕಳೆದ 3 ವರ್ಷದ ವರ್ಷವಾರು ಜಿಲ್ಲಾವಾರು ಮತ್ತು ಬೆಳೆವಾರು ವಿವರ ನೀಡುವುದು) | ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಸಹಾಯಧನವನ್ನು ಜಿಲ್ಲೆಗಳ ಬೇಡಿಕೆಯನುಸಾರ ಗುರಿ ನಿಗಧಿಪಡಿಸಿ, ಯೋಜನೆಯ ಕುರಿತು ಸ್ಥಳೀಯ ಪತ್ರಿಕೆ ಹಾಗೂ ಕರಪತ್ರಗಳ ಮೂಲಕ ಪ್ರಚಾರ ನೀಡಿ ಸಲ್ಲಿಕೆಯಾದ ಅರ್ಜಿಗಳಲ್ಲಿ ಅರ್ಹ ಫಲಾನುಭವಿಗಳಿಗೆ ಜೇಷ್ಠತೆಯನುಸಾರ ಹಂಚಲಾಗಿದೆ. ಕಳೆದ 3 ವರ್ಷದ ವರ್ಷವಾರು ಜಿಲ್ಲಾವಾರು ಮತ್ತು ಬೆಳೆವಾರು ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |

| | | |
|---|---|---|
| ಇ) | ಕೇಂದ್ರ ಸರ್ಕಾರದಿಂದ ಈ ಅಭಿಯಾನದಡಿಯಲ್ಲಿ ದೊರೆಯುವ ಸಹಾಯ ಧನವನ್ನು ತೋಟಗಾರಿಕೆ ಬೆಳೆಗಾರರು ಸುಲಲಿತವಾಗಿ ಪಡೆಯಲು ಸರ್ಕಾರ ರೂಪಿಸಿರುವ ವ್ಯವಸ್ಥೆ ಯಾವುದು; ಈ ವ್ಯವಸ್ಥೆಯ ರಾಜ್ಯ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಯಾರು; ಇವರುಗಳು ರಾಜ್ಯದಲ್ಲಿ ಅಥವಾ ಕೇಂದ್ರದಲ್ಲಿರುವ ಭಾರತೀಯ ಮಸಾಲಾ ಮಂಡಳಿಯೊಂದಿಗೆ ಇಟ್ಟುಕೊಂಡಿರುವ ಸಮನ್ವಯಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ಕೇಂದ್ರ ಸರ್ಕಾರದಿಂದ ಈ ಅಭಿಯಾನದಡಿಯಲ್ಲಿ ದೊರೆಯುವ ಸಹಾಯಧನವನ್ನು ತೋಟಗಾರಿಕೆ ಬೆಳೆಗಾರರು ಸುಲಲಿತವಾಗಿ ಪಡೆಯಲು ರಾಜ್ಯ ಸರ್ಕಾರ ಹಸಿರು (HASIRU) ತಂತ್ರಾಂಶವನ್ನು ರೂಪಿಸಿದೆ.<br><br>ಈ ವ್ಯವಸ್ಥೆಯಲ್ಲಿ ಮಿಷನ್ ನಿರ್ದೇಶಕರು ರಾಜ್ಯ ಮಟ್ಟದ ಹಾಗೂ ತೋಟಗಾರಿಕೆ ಉಪ ನಿರ್ದೇಶಕರುಗಳು ಜಿಲ್ಲಾಮಟ್ಟದ ಅಧಿಕಾರಿಗಳಾಗಿರುತ್ತಾರೆ. ಕರ್ನಾಟಕ ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿಯು ತೋಟಗಾರಿಕೆ ಇಲಾಖೆಗೆ ಅಂಗ ಸಂಸ್ಥೆಯಾಗಿದ್ದು, ಕರ್ನಾಟಕ ರಾಜ್ಯ ಸರ್ಕಾರದಿಂದ ಅನುದಾನ ಪಡೆಯುತ್ತಿದ್ದು, ಪ್ರಸ್ತುತ ಮಂಡಳಿಯು ಕಾರ್ಯಕ್ರಮಗಳನ್ನು ರಾಜ್ಯ ತೋಟಗಾರಿಕೆ ಇಲಾಖೆಯ ಮಾರ್ಗಸೂಚಿಗಳನ್ವಯ ಅನುಷ್ಠಾನ ಗೊಳಿಸುತ್ತಿದೆ.<br><br>ಭಾರತೀಯ ಸಾಂಬಾರು ಮಂಡಳಿಯ ಸಹಯೋಗದಲ್ಲಿ ಸಾಂಬಾರು ಪದಾರ್ಥಗಳ ಮೇಳಗಳು, ರೈತರಿಗೆ ತರಬೇತಿ, ಆಹಾರ ಭದ್ರತಾ ಸಮಾವೇಶ ಹಾಗೂ ಖರೀದಿದಾರರ ಮತ್ತು ಮಾರಾಟಗಾರರ ಸಮಾವೇಶಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. |
| ಈ) | ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಸಾಂಬಾರ ಪದಾರ್ಥ ಉತ್ಪಾದಿಸುವ ಬೆಳೆಗಳ ಕೃಷಿಯ ವೆಚ್ಚ ಅಧಿಕವಾಗಿದ್ದು, ರೈತರಿಗೆ ಲಾಭಕ್ಕಿಂತ ನಷ್ಟ ಅಧಿಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೃಷಿ ಚಟುವಟಿಕೆಗಳಿಗೆ ರೈತರು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುತ್ತಿರುವುದರಿಂದ ಸಮಗ್ರ ಪೋಷಕಾಂಶಗಳ ನಿರ್ವಹಣೆ, ಸಮಗ್ರ ಕೀಟ ನಿರ್ವಹಣೆ ಇತ್ಯಾದಿ ಸುಧಾರಿತ ಬೇಸಾಯ ಕ್ರಮಗಳನ್ನು ಅನುಸರಿಸುತ್ತಿರುವುದರಿಂದ ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಸಾಂಬಾರು ಬೆಳೆಗಳ ಉತ್ಪಾದಕತೆ ಹೆಚ್ಚಾಗಿರುತ್ತದೆ. ಸಾಂಬಾರು ಬೆಳೆಗಳಲ್ಲಿ ಔಷಧೀಯ ಗುಣವಿರುವುದರಿಂದ ದೇಶೀಯ ಬೇಡಿಕೆ ಹೆಚ್ಚಾಗಿರುತ್ತದೆ.2019-20 ನೇ ಸಾಲಿಗಿಂತ 2020-21 ನೇ ಸಾಲಿನಲ್ಲಿ ಸಾಂಬಾರು ಬೆಳೆಗಳಿಗೆ ಉತ್ತಮ ಮಾರುಕಟ್ಟೆ ದರ ಲಭಿಸಿರುತ್ತದೆ. ಕಾಳುಮೆಣಸು, ಏಲಕ್ಕಿ, ಜಾಯಿಕಾಯಿ, ಶುಂಠಿ ಇತ್ಯಾದಿ ಸಾಂಬಾರು ಬೆಳೆಗಳನ್ನು ರಫ್ತು ಮಾಡಲಾಗುತ್ತಿದ್ದು, ಶೇಕಡಾ 30 ರಷ್ಟು ರಫ್ತು ಮೌಲ್ಯ ಹೆಚ್ಚಾಗಿರುವುದಾಗಿ ಅಂದಾಜಿಸಲಾಗಿದೆ.<br><br>ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಪ್ರಸ್ತುತ ಸಾಂಬಾರು ಬೆಳೆಗಳಿಗೆ ನೀಡುತ್ತಿರುವ ಸಹಾಯಧನವನ್ನು ಹೆಚ್ಚಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. |
| ಉ) | ಉ) ಹಾಗಿದ್ದಲ್ಲಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ತೋಟಗಾರಿಕೆ ಬೆಳೆಗಾರರಿಗೆ ಸಹಾಯಧನ ಹೆಚ್ಚಿಸಲು ಕೈಗೊಂಡಿರುವ ಕ್ರಮಗಳೇನು? (ಪೂರ್ಣ ಮಾಹಿತಿ ನೀಡುವುದು) | |

**HORTI 67 HGM 2022**

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ,
ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಸಚಿವರು

**ಕಳೆದ ಮೂರು ವರ್ಷಗಳಲ್ಲಿ ಸಾಂಬಾರು ಬೆಳೆಗಳ ಬೆಳೆಗಾರರಿಗೆ ನೀಡಿರುವ ಜಿಲ್ಲಾವಾರು ಮತ್ತು ಬೆಳೆವಾರು ಸಹಾಯಧನದ ವಿವರ**

## ಅನುಬಂಧ-1

| ಕ್ರ. ಸಂ | ಜಿಲ್ಲೆಗಳು | 2018-19 | | 2019-20 | | 2020-21 | | ಒಟ್ಟು | |
|---|---|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ಕಾಳು ಮೆಣಸು | | | | | | | | | |
| 1 | ಶಿವಮೊಗ್ಗ | 124.45 | 24.89 | 92.61 | 18.97 | 97.85 | 19.57 | 314.91 | 63.43 |
| 2 | ಕೊಡಗು | 208.30 | 41.66 | | | | | 208.30 | 41.66 |
| 3 | ಹಾಸನ | 40.00 | 8.00 | 40.00 | 8.00 | 108.00 | 21.48 | 188.00 | 37.48 |
| 4 | ಚಿಕ್ಕಮಗಳೂರು | 152.00 | 30.45 | 50.00 | 10.00 | 34.00 | 6.80 | 236.00 | 47.25 |
| 5 | ತುಮಕೂರು | 10.00 | 2.00 | 10.00 | 2.00 | 40.00 | 8.00 | 60.00 | 12.00 |
| 6 | ದಕ್ಷಿಣ ಕನ್ನಡ | 40.08 | 8.07 | 33.78 | 6.00 | 27.03 | 5.15 | 100.89 | 19.22 |
| 7 | ಉಡುಪಿ | 41.44 | 8.29 | 44.81 | 8.98 | 39.23 | 7.85 | 125.48 | 25.11 |
| 8 | ಉತ್ತರ ಕನ್ನಡ | 172.42 | 34.48 | 56.40 | 11.28 | 175.00 | 35.00 | 403.82 | 80.76 |
| 9 | ರಾಮನಗರ | 2.00 | 0.40 | 10.00 | 2.00 | 10.00 | 2.00 | 22.00 | 4.40 |
| 10 | ದಾವಣಗೆರೆ | 55.00 | 11.00 | 49.96 | 9.99 | | | 104.96 | 20.99 |
| 11 | ಚಿತ್ರದುರ್ಗ | 25.00 | 4.62 | 9.86 | 1.97 | | | 34.86 | 6.60 |
| | ಉಪಮೊತ್ತ | 870.69 | 173.86 | 397.42 | 79.19 | 531.11 | 105.85 | 1799.22 | 358.90 |
| Spices - Tree Spices (Nut meg, Clove, Kokum, Cinnamon, Allspice, etc) | | | | | | | | | |
| ದಾಲ್ಚಿನಿ (Spices - Cinnamon) | | | | | | | | | |
| 1 | ಶಿವಮೊಗ್ಗ | | | | | 1.00 | 0.20 | 1.00 | 0.20 |
| | ಉಪಮೊತ್ತ | | | | | 1.00 | 0.20 | 1.00 | 0.20 |
| ಲವಂಗ (Spices - Clove) | | | | | | | | | |
| 1 | ಚಿಕ್ಕಮಗಳೂರು | | | | | 10.00 | 2.00 | 10.00 | 2.00 |
| | ಉಪಮೊತ್ತ | | | | | 10.00 | 2.00 | 10.00 | 2.00 |
| ಜಾಯಿಕಾಯಿ (Spices - Nutmeg) | | | | | | | | | |
| 1 | ಶಿವಮೊಗ್ಗ | | | 8.00 | 1.60 | 15.05 | 3.01 | 23.05 | 4.61 |
| 2 | ಚಿಕ್ಕಮಗಳೂರು | | | | | 16.00 | 3.20 | 16.00 | 3.20 |
| 1 | ಉತ್ತರ ಕನ್ನಡ | | | 12.00 | 2.40 | | | 12.00 | 2.40 |
| | ಉಪಮೊತ್ತ | | | 20.00 | 4.00 | 31.05 | 6.21 | 51.05 | 10.21 |
| ಪುನಶ್ಚೇತನ ಕಾಳು ಮೆಣಸು - Pepper | | | | | | | | | |
| 1 | ಶಿವಮೊಗ್ಗ | 50.42 | 3.88 | 19.02 | 4.75 | 100.00 | 20.00 | 169.44 | 28.63 |
| 2 | ಕೊಡಗು | 74.81 | 14.96 | 826.00 | 82.65 | 319.48 | 63.90 | 1220.29 | 161.51 |
| 3 | ಹಾಸನ | 85.00 | 17.00 | 179.00 | 35.80 | 400.00 | 80.00 | 664.00 | 132.80 |
| 4 | ಚಿಕ್ಕಮಗಳೂರು | 418.00 | 41.81 | 300.00 | 30.00 | 500.00 | 49.98 | 1218.00 | 121.79 |
| 5 | ದಕ್ಷಿಣ ಕನ್ನಡ | 95.51 | 9.70 | 48.88 | 5.00 | 49.88 | 4.99 | 194.27 | 19.69 |
| 6 | ಉಡುಪಿ | 33.22 | 3.32 | 38.41 | 3.82 | 40.00 | 4.00 | 111.63 | 11.14 |
| 7 | ಉತ್ತರ ಕನ್ನಡ | 39.00 | 7.79 | 25.00 | 5.00 | 35.00 | 7.00 | 99.00 | 19.79 |
| 8 | ದಾವಣಗೆರೆ | | | 20.00 | 4.00 | 50.00 | 10.00 | 70.00 | 14.00 |
| | ಉಪಮೊತ್ತ | 795.96 | 98.46 | 1456.31 | 171.03 | 1494.36 | 239.86 | 3746.63 | 509.35 |
| ಒಟ್ಟು | | 1666.65 | 272.32 | 1873.74 | 254.22 | 2067.51 | 354.12 | 5607.90 | 880.65 |